# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

## ಅನುಬಂಧ-1

**ಸಹಾಯಕ ಪ್ರಾಧ್ಯಾಪಕರು**

ದಿನಾಂಕ:19.12.2017ರಂದು ಸಂಖ್ಯೆ:ಸದಂಕಾಸಂಸಂ/ಸಿಬ್ಬಂದಿ(1)/30/2016-17ರಲ್ಲಿ ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.12.2017ರಲ್ಲಿದ್ದಂತೆ ಪ್ರಕಟಿಸಿ ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಬಾಧಿತರಿದ್ದರೆ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಸಮರ್ಥನಿಯವಾದ ಅಗತ್ಯ ದಾಖಲಾತಿಗಳೊಂದಿಗೆ ಈ ಜೇಷ್ಠತಾ ಪಟ್ಟಿ ಪ್ರಕಟಿಸಿದ 15 ದಿನಗಳೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿತ್ತು. ಸದರಿ ಜೇಷ್ಠತಾ ಪಟ್ಟಿ ದಿನಾಂಕ:19.12.2017ರಂದು ಎಲ್ಲಾ ವಿಭಾಗಗಳು ಪಡೆದುಕೊಂಡಿರುತ್ತವೆ. ಈ ಸಂಸ್ಥೆಯ ವತಿಯಿಂದ ಪ್ರಕಟಿಸಿರುವ ಸಹಾಯಕ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಗೆ ಕಮ್ಯೂನಿಟಿ ಡೆಂಟಿಸ್ಟ್ರಿ ವಿಭಾಗದ ಡಾ: ಕೆ.ಆರ್.ಸೌಮ್ಯ ರವರು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ.

ಸದರಿ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಕಮ್ಯೂನಿಟಿ ಡೆಂಟಿಸ್ಟ್ರಿ ವಿಭಾಗ ಸಹಾಯಕ ಪ್ರಾಧ್ಯಾಪಕರಾದ ಡಾ: ಕೆ.ಆರ್.ಸೌಮ್ಯರವರು ನನ್ನ ಹೆಸರು ಅದೇ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ: ಎಸ್.ಆರ್.ಉಮಾ ರವರ ಹೆಸರಿನ ಕ್ರಮ ಸಂಖ್ಯೆಯ ಮೇಲಿಡಬೇಕೆಂದು ಕೋರಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಸದರಿಯವರು ದಂತ ಅಧಿಕಾರಿಯಾಗಿ ನೇಮಕಾತಿಯಾಗಿರುವ ಆದೇಶದ ದಿನಾಂಕ:01.08.2012, ಈ ಸಂಸ್ಥೆಯಿಂದ ದಿನಾಂಕ:03.08.2012ರಂದು ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 01.01.2008ರಲ್ಲಿದ್ದಂತೆ, ದಿನಾಂಕ:02.02.2011 ಮತ್ತು ದಿನಾಂಕ:20.12.2017ರಂದು ಪ್ರಕಟಿಸಿರುವ ದಂತ ಆರೋಗ್ಯಾಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿ ಹಾಗೂ ದಿನಾಂಕ:14.03.2011ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಸೂಚನೆ ಪ್ರತಿಗಳನ್ನು ದಿನಾಂಕ:20.12.2017 ರಂದು ಸಲ್ಲಿಸಿರುತ್ತಾರೆ.

ಸದರಿ ಡಾ: ಕೆ.ಆರ್.ಸೌಮ್ಯ ಮತ್ತು ಡಾ: ಎಸ್.ಆರ್.ಉಮಾ ಸಹಾಯಕ ಪ್ರಾಧ್ಯಾಪಕರು, ಕಮ್ಯೂನಿಟಿ ಡೆಂಟಿಸ್ಟ್ರಿ ವಿಭಾಗ, ಇವರ ಸೇವಾ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಸೇವಾ ವಿವರ | ಡಾ: ಕೆ.ಆರ್.ಸೌಮ್ಯ ರವರ ವಿವರ | ಡಾ: ಎಸ್.ಆರ್.ಉಮಾ ರವರ ವಿವರ |
|---|---|---|---|
| 1 | ಜನ್ಮ ದಿನಾಂಕ | 04.04.1975 | 12.07.1974 |
| 2 | ದಂತ ಅಧಿಕಾರಿಯ ಹುದ್ದೆಯ ಆಯ್ಕೆ ಕ್ರಮ ಸಂಖ್ಯೆ | 34 | 92 |
| 3 | ಸೇವೆಗೆ ಸೇರಿದ ದಿನಾಂಕ | 09.09.2000 | 11.09.2000 |
| 4 | ಈ ಸಂಸ್ಥೆಯಲ್ಲಿ ಅನ್ಯಪರ ಉಪನ್ಯಾಸಕರಾಗಿ ನಿಯೋಜನೆಗೊಂಡ ದಿನಾಂಕ | 21.05.2007 | 12.10.2007 |
| 5 | ಶಾಶ್ವತವಾಗಿ ಈ ಸಂಸ್ಥೆಯಲ್ಲಿ ಉಪನ್ಯಾಸಕರಾಗಿ ವಿಲೀನಗೊಂಡ ದಿನಾಂಕ | 30.07.2010 | 30.07.2010 |

ಸದರಿ ಬೋಧಕ ಸಿಬ್ಬಂದಿಗಳಿಗೆ ಜೇಷ್ಠತೆ ಸಂಬಂಧ ದಿನಾಂಕ:16.01.2018ರಂದು ಸಂಸ್ಥೆಯ ನಿರ್ದೇಶಕರ ಕೊಠಡಿಯಲ್ಲಿ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ಡಾ: ಕೆ.ಆರ್.ಸೌಮ್ಯರವರು ನಾನು ದಿನಾಂಕ: 20.12.2017 ರಂದು ಸಲ್ಲಿಸಿರುವ ಆಕ್ಷೇಪಣೆಗೆ ಬದ್ಧಳಾಗಿರುತ್ತೇನೆಂದು ಹೇಳಿದರು ಮತ್ತು ಡಾ: ಎಸ್.ಆರ್.ಉಮಾರವರು ದಾಖಲಾತಿಗಳನ್ನು ಸಲ್ಲಿಸಲು 15 ದಿವಸಗಳ ಕಾಲಾವಕಾಶ ನೀಡಬೇಕೆಂದು ಲಿಖಿತ ರೂಪದಲ್ಲಿ ತಿಳಿಸಿರುತ್ತಾರೆ.

ಸದರಿ ಬೋಧಕ ಸಿಬ್ಬಂದಿಗಳು ಒಂದೇ ದಿನ ಈ ಸ್ವಾಯತ್ತ ಸಂಸ್ಥೆಯಲ್ಲಿ ಶಾಶ್ವತವಾಗಿ ವಿಲೀನಗೊಂಡಿರುತ್ತಾರೆ. ಸದರಿ ಬೋಧಕ ಸಿಬ್ಬಂದಿಗಳು ದಂತ ಅಧಿಕಾರಿಗಳಾಗಿ ಸರ್ಕಾರಿ ಅಧಿಸೂಚನೆ ಸಂಖ್ಯೆ:ಆಕುಕ 2 ಹೆಚ್ಎಸ್‌ಡಿ 2000 ದಿನಾಂಕ:26.08.2009ರಲ್ಲಿ ನೇಮಕಗೊಂಡಿರುತ್ತಾರೆ. ಸದರಿ ನೇಮಕಾತಿ ಆದೇಶದಲ್ಲಿ ಅಭ್ಯರ್ಥಿಗಳ ಜೇಷ್ಠತೆಯು ವಿಶೇಷ ಆಯ್ಕೆ ಸಮಿತಿಯು ನೀಡಿರುವ ಪಟ್ಟಿಯ ಕ್ರಮಾಂಕದಂತೆ ಇರುತ್ತದೆಂದು ತಿಳಿಸಲಾಗಿದೆ. ಸದರಿ ಆಯ್ಕೆ ಪಟ್ಟಿಯಲ್ಲಿ ಡಾ: ಕೆ.ಆರ್.ಸೌಮ್ಯರವರ ಕ್ರಮಾಂಕ 34ರಲ್ಲಿರುತ್ತಾರೆ ಹಾಗೂ ಡಾ: ಎಸ್.ಆರ್.ಉಮಾರವರು 92ರ ಕ್ರಮಾಂಕದಲ್ಲಿರುತ್ತಾರೆ. ಡಾ: ಎಸ್.ಆರ್.ಉಮಾರವರು 15 ದಿನಗಳ ಕಾಲಾವಕಾಶ ಕೋರಿರುವುದರಿಂದ, ಪ್ರಸ್ತುತ ಸದರಿ ವಿಭಾಗದ ಸಹಾಯಕ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸದೇ ಇರಲು ನಿರ್ಧರಿಸಲಾಯಿತು.

ಡಾ: ಎಸ್.ಆರ್.ಉಮಾ ಇವರಿಗೆ 15 ದಿನಗಳ ಕಾಲಾವಕಾಶ ನೀಡಿದ್ದರೂ ಸಹ, ಇವರು ಯಾವುದೇ ಲಿಖಿತ ಹೇಳಿಕೆಯನ್ನು ನೀಡಿರುವುದಿಲ್ಲ. ಆದ್ದರಿಂದ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆಯಲ್ಲಿ ಡಾ: ಕೆ.ಆರ್.ಸೌಮ್ಯ ಇವರ ಹೆಸರು ಮೊದಲನೇಯದಾಗಿದ್ದು ಹಾಗೂ ಡಾ: ಎಸ್.ಆರ್.ಉಮಾ ಎರಡನೇಯದಾಗಿ ಜೇಷ್ಠತಾ ಪಟ್ಟಿಯಲ್ಲಿ ಪ್ರಕಟಿಸಲಾಗಿದೆ.

31/3/18

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.